ಅವಶ್ಯಕ ಸೇವೆಗಳಲ್ಲಿ ಖಾಲಿ ಹುದ್ದೆಗಳ ಭರ್ತಿ

1717. ಶ್ರೀ ವೈ.ಎಂ. ವೀರಣ್ಣ (ದಾವಣಗೆರೆ) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಾಲಾ ಕಾಲೇಜುಗಳಿಗೆ ಮತ್ತು ಸಾರಿಗೆ ಬಸ್ಸುಗಳಿಗೆ ಹಾಗೂ ಹಲವಾರು ಇಲಾಖಾ ಕಛೇರಿಗಳಿಗೆ ಅಗತ್ಯ ಸೇವಾ ಸಿಬ್ಬಂದಿ ವರ್ಗದ ನೇಮಕಾತಿ ಬಗ್ಗೆ ಕಳೆದ ಒಂದೂವರೆ ವರ್ಷದಿಂದ ಸರ್ಕಾರದಿಂದ ಬರುತ್ತಿರುವ ಹೇಳಿಕೆಗಳು ನೈಜವಾಗಿ ಕಾರ್ಯಗತವಾಗಲು ಇನ್ನೆಷ್ಟು ವರ್ಷ ಬೇಕಾಗಬಹುದು;

ಆ) ಅರ್ಜಿಗಳನ್ನು ಕರೆದು ಸಂದರ್ಶನ ಮುಂದೂಡುತ್ತಿರುವುದರಿಂದ ಲಕ್ಷಾಂತರ ನಿರುದ್ಯೋಗಿಗಳಿಗೆ ಆರ್ಥಿಕ ಸಂಕಷ್ಟ, ಮಾನಸಿಕ ಯಾತನೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಇ) ಇನ್ನು ಮುಂದೆ ಅಭ್ಯರ್ಥಿಗಳಿಗೆ ಆರ್ಥಿಕ ಹೊರೆ ಬೀಳದಂತೆ ಅರ್ಜಿ ಶುಲ್ಕ ವಿನಾಯಿತಿ ಮತ್ತು ಸಂದರ್ಶನಕ್ಕೆ ಉಚಿತ ಪ್ರಯಾಣ ಸೌಲಭ್ಯ ಕಲ್ಪಿಸಲು ಸರ್ಕಾರ ಆಲೋಚಿಸಿದೆಯೆ?

ಈ) ಇಲ್ಲದಿದ್ದರೆ ಈ ಬಗ್ಗೆ ಕಾನೂನೊಂದನ್ನು ತಂದು ಬಡ ಅಭ್ಯರ್ಥಿಗಳಿಗೆ ಅನುಕೂಲ ಕಲ್ಪಿಸಲು ಸಾಧ್ಯವೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಯವರು) :

ಅ) ಅವಶ್ಯಕ ಸೇವೆಗಳಲ್ಲಿ ಮತ್ತು ಖಾಲಿ ಹುದ್ದೆಗಳನ್ನು ಭರ್ತಿ ಮಾಡಲೇಬೇಕಾದ ಅವಶ್ಯಕತೆ ಇರುವೆಡೆಯಲ್ಲಿ ಹುದ್ದೆಗಳನ್ನು ಭರ್ತಿ ಮಾಡಲು ಈಗಾಗಲೇ ಸರ್ಕಾರವು ಕ್ರಮ ಕೈಗೊಂಡಿದೆ ಮತ್ತು ಕ್ರಮ ಕೈಗೊಳ್ಳಲಾಗತ್ತಿದೆ.

ಆ) ಇಲ್ಲ.

ಇ) ಇಲ್ಲ.

ಈ) ಪ್ರಸ್ನೆ (ಇ) ಗೆ ನೀಡಿರುವ ಉತ್ತರದಿಂದಾಗಿ. ಇದು ಉದ್ಭವಿಸುವುದಿಲ್ಲ.

ಲಕ್ಷ್ಮೇಶ್ವರದಲ್ಲಿ ಕುಡಿಯುವ ನೀರಿನ ಅಭಾವ

1204. ಶ್ರೀ ಎಸ್.ಎಸ್. ಪಾಟೀಲ್ (ಶಿರಹಟ್ಟಿ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿರಹಟ್ಟಿ ತಾಲ್ಲೂಕಿನ ಲಕ್ಷ್ಮೇಶ್ವರ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಈ ಸಮಸ್ಯೆಯನ್ನು ನಿವಾರಿಸಲು ಕೈಗೊಂಡ ಕ್ರಮವೇನು?